**ಓ.ಎಸ್. ನಂ. 144/2019**

**ಡಿ.ಡಬ್ಲ್ಯು: 02 (ಓಬ್ಬಯ್ಯ)**

**<u>ದಿನಾಂಕ: 19.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ – ಶ್ರೀ KJG ವಕೀಲರಿಂದ.</u>**

2 ನೇ ಪ್ರತಿವಾದಿ ನನ್ನ ಅಜ್ಜಿ ಅವರು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ನಾವು ಸದರಿ ಪ್ರತಿವಾದ ಪತ್ರವನ್ನು ಅಳವಡಿಸಿಕೊಂಡಿರುತ್ತೇವೆ. ನನ್ನ ಅಜ್ಜಿ ನನಗೆ ಜಿಪಿಯ ನೀಡಿದ್ದು ನಾನೇ ಅವರ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. 3 ರಿಂದ 8 ನೇ ಪ್ರತಿವಾದಿಗಳ ಪರವಾಗಿ ಸಹ ನಾನೇ ಪ್ರತಿವಾದ ಪತ್ರದ ಪ್ರಮಾಣ ವಚನ ಸಲ್ಲಿಸಿದ್ದು ಸಾಕ್ಷವನ್ನು ಸಹ ಅವರ ಪರವಾಗಿ ನಾನು ನುಡಿಯುತ್ತಿದ್ದೇನೆ. ನನಗೆ ಈ ಪ್ರಕರಣದ ಎಲ್ಲಾ ದಾಖಲಾತಿಗಳ ಬಗ್ಗೆ ಮಾಹಿತಿ ಇದೆ. 2 ನೇ ಪ್ರತಿವಾದಿಗೆ ಓಬ್ಬಯ್ಯ, ರಾಜಪ್ಪ ಬೋರಯ್ಯ ಮತ್ತು ಸೋಮಶೇಖರ ಎಂಬ ಮಕ್ಕಳಿದ್ದಾರೆ. ಓಬ್ಬಯ ಮೃತಪಟ್ಟಿರುತ್ತಾರೆ. ಅವರ ಹೆಂಡತಿ ಮಕ್ಕಳು ಪ್ರತಿವಾದಿ-4 ರಿಂದ 8 ಆಗಿರುತ್ತಾರೆ ಎಂದರೆ ಹೌದು. ರಾಜಪ್ಪ ಮೃತಪಟ್ಟಿರುತ್ತಾರೆ. ಅವರ ಹೆಂಡತಿ ಪ್ರತಿವಾದಿ-9 ಆಗಿರುತ್ತಾರೆ ಎಂದರೆ ಹೌದು. ಬೋರಯ್ಯ 3 ನೇ ಪ್ರತಿವಾದಿಯಾಗಿರುತ್ತಾರೆ. ಸೋಮಶೇಖರ ಮೃತಪಟ್ಟಿರುತ್ತಾರೆ. ಅವರ ಹೆಂಡತಿ ಮಕ್ಕಳು ಪ್ರತಿವಾದಿ-2 ಎ, 2 ಎ 1-3 ಆಗಿರುತ್ತಾರೆ ಎಂದರೆ ಹೌದು. 2 ನೇ ಪ್ರತಿವಾದಿಯ ವಾರಸುದಾರರು ಎಲ್ಲಾರು ಈ ದಾವೆಯಲ್ಲಿ ಪಕ್ಷಗಾರರಾಗಿದ್ದಾರೆ ಎಂದರೆ ಹೌದು. ಜಯಮ್ಮ ಎಂಬುವವರು ಪ್ರತಿವಾದಿ-9 ಆಗಿ ಸೇರ್ಪಡೆಯಾಗಿದ್ದಾರೆ ಎಂದರೆ ಹೌದು.

2 ನೇ ಪ್ರತಿವಾದಿಯ ಗಂಡನ ಹೆಸರು ಓಬ್ಬಯ್ಯ. ಆತನಿಗೆ ಪಾಲಯ್ಯ ಎಂಬ ಒಡ-ಹುಟ್ಟಿದವರು ಇದ್ದಾರೆ ಎಂದರೆ ಹೌದು. ಓಬ್ಬಯ್ಯ ಮತ್ತು ಪಾಲಯ್ಯ ಗೆದಲಗಟ್ಟೆ ಓಬ್ಬಯ್ಯನ ಮಕ್ಕಳು ಎಂದರೆ ಓಬ್ಬಯ್ಯನ ಮಕ್ಕಳು. 2 ನೇ ಪ್ರತಿವಾದಿಯ ಗಂಡ ಓಬ್ಬಯ್ಯ ನನಗೆ ತಾತಾನಾಗಬೇಕು,2 ನೇ ಪ್ರತಿವಾದಿಯ ಮಾವ ಓಬ್ಬಯ್ಯ ನನಗೆ ಮುತ್ತಾತನಾಗಬೇಕು ಎಂದರೆ ಸರಿಯಲ್ಲ. ನನ್ನ ಮುತ್ತಾತನ ತಂದೆ ಮಾರಯ್ಯ ಎಂದರೆ ಹೌದು. ಮಾರಯ್ಯನಿಗೆ ಮೂರು ಜನ ಮಕ್ಕಳು ಅದರಲ್ಲಿ ಪಾಲಯ್ಯ, ಓಬ್ಬಯ್ಯ ಮತ್ತು ಬೋರಯ್ಯ ಎಂದರೆ ಹೌದು. ನಾನು ಓಬ್ಬಯ್ಯ ತಂದೆ ಮಾರಯ್ಯರವರ ಮೊಮ್ಮಗನ ಮಗ. ನಮ್ಮ ಕುಟುಂಬಕ್ಕೆ ಗೆದಲಗಟ್ಟೆ ಎಂಬ ಹೆಸರಿದೆ ಎಂದರೆ ಹೌದು.

ಓಬ್ಬಯ್ಯ ತಂದೆ ಓಬ್ಬಯ್ಯರವರ ತಮ್ಮ ಪಾಲಯ್ಯನ ಮಗನ ಹೆಸರು ಕೃಷ್ಣಪ್ಪ ಎಂದರೆ ಹೌದು. ನನ್ನ ಕುಟುಂಬದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು 26 ಎಕರೆ 1 ಸೆಂಟ್ಸ್ ಗೆ ಸಲ್ಲಿಸಿರುತ್ತಾರೆ. ನಾನು 9 ನೇ ತರಗತಿ ಓದಿರುತ್ತೇನೆ. ಈ ದಾವೆಯನ್ನು 17 ಎಕರೆ 35 ಸೆಂಟ್ಸ್ ಗೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 26 ಎಕರೆ 1 ಸೆಂಟ್ಸ್ ರಲ್ಲಿ ಉತ್ತರಕ್ಕೆ ಪಾಲಯ್ಯ ರವರ ಭಾಗಕ್ಕೆ 8.66 ಸೆಂಟ್ಸ್ ಬಂದಿರುತ್ತದೆ ಎಂದರೆ ಬೋರಯ್ಯನ ಭಾಗದ ಆಸ್ತಿ ಉತ್ತರಕ್ಕೆ ಇದೆ. ದಕ್ಷಿಣ ದಿಕ್ಕಿಗೆ ಬೋರಯ್ಯನ ಭಾಗಕ್ಕೆ 8.66 ಸೆಂಟ್ಸ್ ಬಂದಿರುತ್ತದೆ ಎಂದರೆ ಶಾಂತಮ್ಮನ ಆಸ್ತಿ ಇದೆ. ಮಧ್ಯದ ಭಾಗ ಓಬ್ಬಯ್ಯನ ತಂದೆ ಮಾರಯ್ಯನ

ಭಾಗಕ್ಕೆ ಬಂದಿದೆ ಎಂದರೆ ಹೌದು. ಈ ಹಿಂದೆ 26.01 ಎಕರೆ ಜಮೀನನ್ನು ಮಾರಯ್ಯ ಮೂರು ಮಕ್ಕಳು ವಿಭಾಗ ಮಾಡಿಕೊಂಡು ಸಾಗುವಳಿ ಮಾಡಿಕೊಂಡಿದ್ದರು ಎಂದರೆ ಭಾಗ ಮಾಡಿಕೊಂಡಿರುವುದಿಲ್ಲ ಹಾಗೆ ಅನುಭವಿಸುತ್ತಿದ್ದಾರೆ. ನಾವು 8.69 ಎಕರೆ ಜಮೀನನ್ನು ಅನುಭವಿಸಿ ಕೊಂಡು ಬಂದಿದ್ದೇವೆ. ಈ ರೀತಿ 1968 ರಿಂದ ಅನುಭವಿಸಿ ಕೊಂಡು ಬಂದಿದ್ದೇವೆ. ಅವರು ವಿಭಾಗವಾದ ನಂತರದಿಂದ ಅಂದರೆ 1968 ರ ಪೂರ್ವದಿಂದಲು ಅವರುಗಳು ಅವರಿಗೆ ಬಂದ ಜಮೀನಿಗೆ ಸಂಬಂದಿಸಿದ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ-13 ರ ಅನ್ವಯ ದಿಃ 30.06.1956 ನೇ ಇಸವಿಯಲ್ಲಿ ಗೆದಲಗಟ್ಟೆ ಓಬ್ಬಯ್ಯ ತನ್ನ ತಮ್ಮ ಪಾಲಯ್ಯನಿಗೆ ತನ್ನ ಭಾಗದ 5 ಎಕರೆ 79 ಸೆಂಟ್ಸ್ ನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಪಾಲಯ್ಯನ ಮಗ ಕೃಷ್ಣಪ್ಪ ದಿಃ 30.04.2001 ನೇ ಇಸವಿಯಲ್ಲಿ ನಿಪಿ-14 ರ ಅನ್ವಯ ತಿಪ್ಪೆಸ್ವಾಮಿ ಎಂಬುವವರಿಗೆ 8 ಎಕರೆ 66 ಸೆಂಟ್ಸ್ ನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದು 26.01 ಎಕರೆಯಲ್ಲಿ ಮಧ್ಯ ಭಾಗದಲ್ಲಿದ್ದು ಅದು ನನ್ನ ಮುತ್ತಾತನ ಭಾಗಕ್ಕೆ ಬಂದಿರುವ ಜಮೀನು ಆಗಿರುತ್ತದೆ ಎಂದರೆ ಸುಳ್ಳು.

3 ನೇ ಪ್ರತಿವಾದಿ ಬೋರಯ್ಯನ ನಮಗೂ ಅದರಲ್ಲಿ ಭಾಗ ಇದೆ ಎಂದು ಅಸಲು ದಾವೆ 140/99 ರಲ್ಲಿ ಪ್ರಶ್ನಿಸಿದ್ದರು ಎಂದರೆ ಸುಳ್ಳು. ಅದಕ್ಕೆ ಸಂಬಂಧಿಸಿದ ದಾಖಲಾತಿ ನಿ.ಪಿ-12 ಎಂದು ಗುರುತಿಸಲಾಗಿದೆ ಎಂದರೆ ಸರಿಯಲ್ಲ.ನನ್ನ ಮುತ್ತಾತನಿಗೆ ಬಂದ ಆಸ್ತಿಯನೆಲ್ಲಾ ಈಗಾಗಲೇ ಮಾರಾಟ ಮಾಡಿರುವ ಕಾರಣ ಅದರಲ್ಲಿ ಬೋರಯ್ಯನಿಗೆ ಹಕ್ಕಿಲ್ಲ ಎಂದು ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ಸುಳ್ಳು. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಅದರಲ್ಲಿ ಕೆ.ತಿಪ್ಪೆಸ್ವಾಮಿಯವರು ಈಗಲೂ ಸ್ವಾಧೀನ ಹೊಂದಿದ್ದಾರೆ ಎಂದರೆ ಸುಳ್ಳು. 2 ನೇ ಪ್ರತಿವಾದಿ ದಿಃ12.01.2022 ರಂದು ಮೃತಪಟ್ಟಿದ್ದಾರೆ ಎಂದರೆ ಹೌದು. ಅವರ ಗಂಡ 1975 ನೇ ಇಸವಿಯಲ್ಲಿ ತೀರಿಕೊಂಡಿದ್ದರು ಎಂದರೆ ಸರಿ.ನಾನು ಹಾಜರುಪಡಿಸಿರುವ ದೃಢೀಕರಣ ಪತ್ರ 2024-25 ನೇ ಇಸವಿಗೆ ಸಂಬಂಧಿಸಿದ್ದು ಎಂದರೆ ಹೌದು. ಅದರೊಳಗಡೆ 2 ನೇ ಪ್ರತಿವಾದಿ ಬೆಳೆ ಬೆಳೆದಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಹೌದು.ಅದರಲ್ಲಿ ಚೆಕ್ಕು ಬಂದಿ ಬರೆದಿಲ್ಲ ಎಂದರೆ ಹೌದು. ನನ್ನ ಅಜ್ಜಿ ಮೃತಪಟ್ಟ 2 ವರ್ಷದ ನಂತರ ನೀಡಿರುವ ಸದರಿ ದೃಢೀಕರಣ ಪತ್ರವನ್ನು ನಾನೇ ಹೇಳಿ ಆ ರೀತಿ ಬರೆಸಿರುತ್ತೇನೆ ಎಂದರೆ ನಾವೇ ಸಾಗುವಳಿ ಮಾಡುತ್ತಿರುವ ಕಾರಣ ಆ ರೀತಿ ಬರೆಸಿರುತ್ತೇನೆ.2024-25 ರಲ್ಲಿ 2 ನೇ ಪ್ರತಿವಾದಿ ಮೃತಪಟ್ಟಿದ್ದನು ಎಂದರೆ ಹೌದು ಸಾಕ್ಷಿ ಮುಂದುವರೆದು ಪಹಣಿಯಲ್ಲಿ ಆ ರೀತಿ ಇರುವ ಕಾರಣ ಸದರಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ನಿ.ಪಿ-04 ರಲ್ಲಿ ಓಬಯ್ಯ ಪಾಲಯ್ಯ ತಂದೆ ಬೋರಯ್ಯ ಇವರಿಗೆ 17.35 ಎಕರೆ ಹಾಗೂ ಕೆ.ತಿಪ್ಪೇಸ್ವಾಮಿಗೆ 8.66 ಎಂದು ಇದೆ ಎಂದರೆ ಅದರಲ್ಲಿ ಇರುವ ಓಬಯ್ಯ ನನ್ನ ತಾತ. ನಮ್ಮ ತಾತನ ತಂದೆಯ ಹೆಸರು ಓಬಯ್ಯ. ಈ ದಾವೆಯನ್ನು ಓಬಯ್ಯ ಪಾಲಯ್ಯರ ವಿರುದ್ಧ

ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 2016,2023,2024 ನೇ ಇಸವಿಯ ತೆರಿಗೆ ರಸೀದಿಯನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದರೆ ಹೌದು.ಆದರೆ ಅದರ ಹಿಂದಿನ ರಸೀದಿಗಳು ನನ್ನ ಬಳಿ ಇದೆ ಎಂದರೆ ಹೌದು. ದಾವ ಸಲ್ಲಿಸುವ ಪೂರ್ವದಿಂದ ವಾದಿಯೇ ದಾವ ಸ್ವತ್ತಿನ ತೆರಿಗೆ ಕಟ್ಟುತ್ತಿದ್ದಾರೆ ಎಂದರೆ ಸುಳ್ಳು.

2015 ನೇ ಇಸವಿಯಲ್ಲಿ ವಾದಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮೃತಪಟ್ಟ ನಂತರ 2 ನೇ ಪ್ರತಿವಾದಿ ದಾವ ಸ್ವತ್ತನ್ನು ತನ್ನ ಹೆಸರಿಗೆ ಮುಟೇಷನ್ ಮಾಡಿಸಿಕೊಂಡು ತಾನೇ ಮೃತ ಓಬಯ್ಯನ ಪತ್ನಿ ಎಂದು ಅರ್ಜಿಕೊಟ್ಟು ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ನನ್ನ ತಾತನ ಭಾಗಕ್ಕೆ ಬಂದ ಆಸ್ತಿ ಈಗ ತಿಪ್ಪೇಸ್ವಾಮಿಯ ಹೆಸರಿನಲ್ಲಿ ಇದೆ ಎಂದರೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಸಾಕ್ಷಿ ಮುಂದುವರೆದು ದಾವ ಸ್ವತ್ತು ನನ್ನ ಅಜ್ಜಿಯ ಹೆಸರಿನಲ್ಲಿ ಇದೆ. ನಾವು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ 8.66 ಎಕರೆ ತಿಪ್ಪೇಸ್ವಾಮಿ ಅವರ ಹೆಸರಿನಲ್ಲಿ ಇದೆ ಎಂದರೆ ಹೌದು. ತಿಪ್ಪೇಸ್ವಾಮಿರವರ ಆಸ್ತಿಗೆ ನನ್ನ ತಾತನ ಭಾಗಕ್ಕೆ ಬಂದ ಆಸ್ತಿ ಎಂದರೆ ಸುಳ್ಳು. ನಮ್ಮ ತಾತನ ಭಾಗಕ್ಕೆ ಬಂದ ಆಸ್ತಿಯನ್ನು ಈಗಾಗಲೇ ಮಾರಾಟ ಮಾಡಿರುವ ಕಾರಣ ದಾವೆ ಆಸ್ತಿಯಲ್ಲಿ ನಮಗೆ ಭಾಗ ಇಲ್ಲ ಎಂದರೆ ಇದೆ. ಪ್ರತಿವಾದಿ 2 ರಿಂದ 9 ರವರೇ ಈ ದಾವೆಯಲ್ಲಿ ಬಂದು ಸೇರಿಕೊಂಡಿದ್ದೇವೆ ಎಂದರೆ ಹೌದು. ನನ್ನ ತಾತನ ಆಸ್ತಿಯಲ್ಲಿ ಈ ದಾವೆಯನ್ನು ಸೇರಿಸದ ಕಾರಣ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ದಾವ ಆಸ್ತಿಯಲ್ಲಿ ನಮಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವ ದಾಖಲೆಗಳು ಈ ದಾವೆಗೆ ಸಂಬಂಧಿಸುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಪಾಟೀ ಸವಾಲು ಮುಕ್ತಾಯ:**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಕೂಡ್ಲಿಗಿ.**